# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.559-2017** **ಪಿ . ಡಬ್ಲ್ಯುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಹನುಮಂತಶೆಟ್ಟಿ<br>ಕಾರೇಮೊಳೆ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 23-03-2023. |

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ.ವೈ ವಕೀಲರಿಂದಃ**

8. 1 ನೇ ಪ್ರತಿವಾದಿಗೆ 3 ಜನ ಹೆಣ್ಣು ಮಕ್ಕಳು ಇದ್ದು, ಗಂಡು ಮಕ್ಕಳು ಇರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಷೆಡ್ಯೂಲ್ ಸ್ವತ್ತಿನ ಖಾತೆಯು ನಿಪಿ-1 ರಂತೆ 1 ನೇ ಪ್ರತಿವಾದಿಯ ಹಿರಿಯ ಮಗಳ ಹೆಸರಿನಲ್ಲಿ ಇರುತ್ತದೆ. 1 ನೇ ಪ್ರತಿವಾದಿಯು ತನ್ನ ಮಗಳಿಗೆ ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದಾನ ಪತ್ರವು ನೋಂದಣಿ ಆಗಿದ್ದು, ನೋಂದಣಿ ದಾನ ಪತ್ರದ ಆಧಾರದ ಮೇರೆಗೆ ದಾವಾ ಷೆಡ್ಯೂಲ್ ಸ್ವತ್ತಿನ ಖಾತೆಯು 2 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿ ಹೆಸರಿಗೆ ಖಾತೆ ಆಗುವ ಪೂರ್ವದಲ್ಲಿ ದಾವಾ ಷೆಡ್ಯೂಲ್ ಸ್ವತ್ತು ನಿಪಿ-2 ರಿಂದ 4 ರ ಪ್ರಕಾರ 1 ನೇ ಪ್ರತಿವಾದಿ ಹೆಸರಿನಲ್ಲಿ ಇತ್ತು ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳ ಹೆಸರಿಗೆ ಖಾತೆ ನಮೂದು ಆಗಿರುವುದನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಖಾತೆಯು ಎಷ್ಟು ವರ್ಷಗಳ ಹಿಂದೆ 1 ನೇ ಪ್ರತಿವಾದಿ ಹೆಸರಿಗೆ ಬದಲಾವಣೆ ಆಯಿತು ಎಂದು ನನಗೆ ಗೊತ್ತಿಲ್ಲ. ಸುಮಾರು 40 ವರ್ಷಗಳ ಹಿಂದೆಯೂ ದಾವಾ ಷೆಡ್ಯೂಲ್ ಸ್ವತ್ತಿನ ಖಾತೆಯು 1 ನೇ ಪ್ರತಿವಾದಿ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. 1 ನೇ ಪ್ರತಿವಾದಿ ಹೆಸರಿನಲ್ಲಿ ಪಹಣಿ ಪತ್ರಿಕೆ ಬರುತ್ತಿರುವ ಸಂಬಂಧ ನನದು ಯಾವುದೇ ಅಸಮಾಧಾನ ಇರುವುದಿಲ್ಲ. ದಾವಾ ಸ್ವತ್ತು ಕ್ರಯವಾದ ದಿನದಿಂದಲೂ 1 ನೇ ಪ್ರತಿವಾದಿಯವರೇ ಕಂದಾಯವನ್ನು ಪಾವತಿಸುತ್ತಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಕಂದಾಯವನ್ನು ಪಾವತಿಸುತ್ತಿರುವ ಬಗ್ಗೆ ನನಗೆ ಯಾವುದೇ ಅಸಮಾಧಾನ ಇರುವುದಿಲ್ಲ. ಸಾಕ್ಷಿ ಮುಂದುವರೆದು ಆತನೇ ಸರ್ಕಾರದಿಂದ ಬರುವ ಪರಿಹಾರ

ತೆಗೆದುಕೊಳ್ಳುತ್ತಿರುತ್ತಾನೆ ಎಂದು ನುಡಿಯುತ್ತಾರೆ. ನಾನು ಹೇಳುವ ಪರಿಹಾರವು ಬರಗಾಲದ ಸಮಯ ಸರ್ಕಾರದಿಂದ ರೈತರಿಗೆ ಕೊಡುವ ಪರಿಹಾರವಾಗಿರುತ್ತದೆ ಎಂದರೆ ಸರಿ.

9. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು 1 ನೇ ಪ್ರತಿವಾದಿ 2 ನೇ ಪ್ರತಿವಾದಿ ಹೆಸರಿಗೆ ಮಾಡಿಕೊಟ್ಟಿರುವ ದಾನ ಪತ್ರದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ರಂಗಶೆಟ್ಟಿ ರವರು ಮಂಡ್ಯದ ಸಿದ್ಧೇಗೌಡರ ಬಳಿ ಎಷ್ಟು ವರ್ಷ ಕೂಲಿ ಕೆಲಸ ಮಾಡಿದ್ದಾರೆ ಎಂಬ ಪ್ರಶ್ನೆಗ ಸಾಕ್ಷಿ ನಾನು, ನನ್ನ ಹೆಂಡತಿ ಮತ್ತು 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ 4 ಜನರು ಸುಮಾರು 40 ವರ್ಷ ಬಳಿ ಸಿದ್ಧೇಗೌಡರ ಬಳಿ ಕೆಲಸ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ನಾನಾಗಲಿ ನನ್ನ ಕುಟುಂಬದವರಾಗಲಿ ಸಿದ್ಧೇಗೌಡರ ಬಳಿ ಕೂಲಿ ಕೆಲಸ ಮಾಡಿರುವುದಿಲ್ಲ, ಕೇವಲ 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ಮಾತ್ರ ಸಿದ್ಧೇಗೌಡರ ಬಳಿ ಕೂಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಸಿದ್ಧೇಗೌಡರ ಬಳಿ ಕೆಲಸ ಮಾಡುತ್ತಿರಲಿಲ್ಲ, ಹನುಮಂತೇಗೌಡರ ಬಳಿ ಕೆಲಸಕ್ಕೆ ಇದ್ದೆನು ಎಂದರೆ ಸರಿಯಲ್ಲ.

10. ಪಾಲುಪಟ್ಟಿಯನ್ನು ನಾನೇ ಮಾಡಿಸಿರುತ್ತೇನೆ. ಸದರಿ ಪಾಲುಪಟ್ಟಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಪಾಲುಪಟ್ಟಿಯನ್ನು ನಾಗರಾಜಪ್ಪ ಎಂಬುವವರು ಬರೆದಿರುತ್ತಾರೆ. ಅದನ್ನು ಎಲ್ಲಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾಗರಾಜಪ್ಪನವರೇ ಬರೆಸಿ ನನಗೆ ನೀಡಿರುತ್ತಾರೆ. ಪಾಲುಪಟ್ಟಿಗೆ ನಮ್ಮ ಊರಿನ ಯಜಮಾನರು ಸಹಿ ಮಾಡಿರುತ್ತಾರೆ. ಪಾಲುಪಟ್ಟಿ ಬರೆಯಲು ಸ್ಟ್ಯಾಂಪ್ ಪೇಪರ್ ಅನ್ನು ಯಾರು ತಂದರು ಎಂದು ನನಗೆ ಗೊತ್ತಿಲ್ಲ. ಪಾಲುಪಟ್ಟಿಗೆ ಮಹದೇವಪ್ಪ, ರಾಜಣ್ಣ, ಮಹದೇವಶೆಟ್ಟಿ, ಚಿನ್ನಸ್ವಾಮಿಶೆಟ್ಟಿ, ದೀರಾಳಶೆಟ್ಟಿ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಪಾಲುಪಟ್ಟಿಯನ್ನು ನಾಗರಾಜಪ್ಪ ನವರು ನನಗೆ ನೀಡಿದ ನಂತರ ನಾನು ಸಾಕ್ಷಿದಾರರ ಸಹಿಗಳನ್ನು ಪಾಲುಪಟ್ಟಿಗೆ ಹಾಕಿಸಿರುತ್ತೇನೆ. 1 ನೇ ಪ್ರತಿವಾದಿಗೆ ಸೇರಿದ ದಾವಾ ಷೆಡ್ಯೂಲ್ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಾನು ಮತ್ತು ನನ್ನ ಇತರ ಸಹೋದರರು ಸೇರಿ ಪಾಲುಪಟ್ಟಿಯನ್ನು ಸೃಷ್ಟಿಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-7 ರ ಪಾಲುಪಟ್ಟಿಯಲ್ಲಿ ಇರುವ ಸಹಿ 1 ನೇ ಪ್ರತಿವಾದಿಯದ್ದಲ್ಲ, ಅದನ್ನು ನಾನು ಪೋರ್ಜರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಸಾಕ್ಷಿದಾರರು ನಿಪಿ-7 ಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

11. ನಾನಾಗಲಿ ಇತರೇ ವಾದಿಗಳಾಗಲಿ ದಾವಾ ಷೆಡ್ಯೂಲ್ ಸ್ವತ್ತನ್ನು ನಮ್ಮಗಳ ಹೆಸರಿಗೆ ಖಾತೆ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ ನನಾಗಲಿ ಮತ್ತು ಇತರೇ ವಾದಿಗಳಾಗಲಿ ಯಾವುದೇ ಭಾಗಾಂಶದ ಹಕ್ಕು ಇಲ್ಲದೇ ಇದ್ದರೂ ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಈ ದಾವಾವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ 1 ನೇ ಪ್ರತಿವಾದಿ ಸಾಲ ಪಡೆದು ಅದನ್ನು ತೀರುವಳಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**